International Journal of Kannada Research 2022; 8(3): 97-104

International Journal of Kannada Research
www.kannadajournal.com

**ISSN: 2454-5813**
IJKR 2022; 8(3): 97-104
© 2022 IJKR
www.kannadajournal.com
Received: 17-06-2022
Accepted: 19-07-2022

**ಡಾ. ಹೆಚ್. ಎಂ ಬಸವಣ್ಣ,**
ಸಮಾಜಶಾಸ್ತ್ರ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾಲಯ,
ಮೈಸೂರು, ಕರ್ನಾಟಕ, ಭಾರತ

**ಡಾ.ಎಸ್ ಯಶೋದ**
ಪ್ರಾಧ್ಯಾಪಕರು, ಸಮಾಜಶಾಸ್ತ್ರ
ಅಧ್ಯಯನ ವಿಭಾಗ,
ಮಾನಸಗಂಗೊತ್ರಿ, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಹೆಚ್. ಎಂ ಬಸವಣ್ಣ,**
ಸಮಾಜಶಾಸ್ತ್ರ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾಲಯ,
ಮೈಸೂರು, ಕರ್ನಾಟಕ, ಭಾರತ

# ಬಡಜನರ ಹಸಿವು ನೀಗಿಸುವಲ್ಲಿ ಇಂದಿರಾ ಕ್ಯಾಂಟೀನ್ ಯೋಜನೆಯ ಪಾತ್ರ

**ಡಾ. ಹೆಚ್. ಎಂ ಬಸವಣ್ಣ ಮತ್ತು ಡಾ. ಎಸ್ ಯಶೋದ**

**DOI:** https://doi.org/10.22271/24545813.2022.v8.i3b.741

**ಅಮೂರ್ತ**
ದೇಶದಲ್ಲಿ ಆಡಳಿತ ನಡೆಸಿದ ಪ್ರತಿಯೊಂದು ಸರ್ಕಾರವು ಜನರ ಬಡತನ, ಅನಕ್ಷರತೆ, ನಿರುದ್ಯೋಗ ಹಸಿವು ಮತ್ತು ಅನಾರೋಗ್ಯ ಇತ್ಯಾದಿ ಸಮಸ್ಯೆಗಳನ್ನು ನಿವಾರಿಸಲು ಹಲವಾರು ಜನಪರ ಯೋಜನೆಗಳನ್ನು ರೂಪಿಸಿಕೊಂಡು ಬಂದಿವೆ. ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಸಮಸ್ಯೆಗಳನ್ನು ಹಂತ ಹಂತವಾಗಿ ಕಡಿಮೆ ಮಾಡಿವೆ. "ಹಸಿವಿನಿಂದ ಬಳಲುವ ಜನರಿಗೆ ಆಹಾರ ನೀಡುವುದು ಪ್ರತಿ ಕಲ್ಯಾಣ ರಾಜ್ಯದ ಮೊದಲ ಜವಾಬ್ದಾರಿಯಾಗಿದೆ" ಎಂಬ ಸದುದ್ದೇಶದಿಂದ ಜನರ ಬಡತನ, ಹಸಿವು ಹಾಗೂ ಅಪೌಷ್ಠಿಕತೆ ನಿವಾರಿಸಲು ಭಾರತ ಸರ್ಕಾರ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ', 2013ನ್ನು ಜಾರಿಗೆ ತರಲಾಗಿದೆ. ರಾಜ್ಯದ ಅಂದಿನ ಮುಖ್ಯಮಂತ್ರಿಗಳು, ಪ್ರಸ್ತುತ ವಿರೋಧ ಪಕ್ಷದ ನಾಯಕರದ ಶ್ರೀ. ಸಿದ್ದರಾಮಯ್ಯನವರು ಬಡವರ ಮೇಲಿನ ನೈಜ ಕಾಳಜಿಯಿಂದ "ಅನ್ನಭಾಗ್ಯ" ಯೋಜನೆಯ ಜೊತೆಗೆ ನಗರ ಪ್ರದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ವಿತರಿಸುವ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವು ಯೋಜನೆಯ ಸಾಧಕ-ಭಾಧಕಗಳನ್ನು ಸವಿಸ್ತಾರವಾಗಿ ಚರ್ಚಿಸುತ್ತದೆ.

**ಕೀವರ್ಡ್ಸ್:** ಬಡತನ, ಹಸಿವು, ಅಪೌಷ್ಠಿಕತೆ, ಅಹಾರ ಭದ್ರತಾ ಕಾಯ್ದೆ, ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್ ಯೋಜನೆ.

## ಪೀಠಿಕೆ

ನಗರದ ಬಡ ಕೂಲಿ ಕಾರ್ಮಿಕರು, ನಿರ್ಗತಿಕರು, ಆಟೋ ಮತ್ತು ಟ್ಯಾಕ್ಸೀ ಚಾಲಕರು, ವಿದ್ಯಾರ್ಥಿಗಳು ಹಾಗೂ ಅಸಂಘಟಿತ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಬಡ ವರ್ಗದ ಜನರನ್ನು ಹಸಿವು ಮುಕ್ತರನ್ನಾಗಿಸುವ ಸಲುವಾಗಿ ಆಗಸ್ಟ್, 15, 2017 ರಂದು 'ಇಂದಿರಾ ಕ್ಯಾಂಟೀನ್' ಯೋಜನೆಯನ್ನು ಮೊದಲು ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ 101 ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡಲಾಯಿತು. ಯೋಜನೆಯ ಜನಪರತೆ ಮತ್ತು ಅದರ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಅದರಲ್ಲೂ, ರಾಜ್ಯದ ವಿಶೇಷ ಜಿಲ್ಲೆಯಾದ ಮೈಸೂರು ನಗರದ 11 ಸ್ಥಳಗಳಲ್ಲಿ ಜನವರಿ 2018 ರಂದು ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡಲಾಯಿತು. ಅತ್ಯಂತ ಕಡಿಮೆ ದರದಲ್ಲಿ ಬೆಳಗಿನ ಉಪಹಾರ ಮತ್ತು ಊಟ ನೀಡುವ ಇಂದಿರಾ ಕ್ಯಾಂಟೀನ್ ಜಾತಿ, ಲಿಂಗ, ಧರ್ಮ, ಭಾಷೆ ಎಲ್ಲ ಎಲ್ಲೆಗಳನ್ನು ಮೀರಿ ಪ್ರತಿಯೊಬ್ಬರು ಮುಕ್ತವಾಗಿ ಆಹಾರ ಸೇವಿಸಲು ಎಲ್ಲ ವರ್ಗಗಳ ಜನರಿಗೂ ಅವಕಾಶವನ್ನು ಒದಗಿಸಿ ಕೊಟ್ಟಿದೆ. ಸಮಾಜದಲ್ಲಿ ಸಾಮರಸ್ಯ ಬೆಳೆಸುವ ಹಿನ್ನೆಲೆಯೊಂದಿಗೆ ಕಾಯಕ ಯೋಗಿ, ಸಮಾನತವಾದಿ ಶರಣ ಬಸವಣ್ಣನವರ ದಾಸೋಹ ತತ್ವದ ಆಶಯಕ್ಕೆ ಪೂರಕವಾಗಿ ಜನಪರ ಕಾಳಜಿಯಿಂದ ಕ್ಯಾಂಟೀನ್‌ಗಳನ್ನು ನಿರ್ಮಾಣ ಮಾಡಿರುವ ಸ್ಥಳಗಳು ಬಹಳ ವಿಶೇಷವಾಗಿವೆ. ಅವುಗಳಲ್ಲಿ ಬಸ್ ನಿಲ್ದಾಣಗಳು, ಸರ್ಕಾರಿ ಆಸ್ಪತ್ರೆಗಳು, ಕೂಲಿ ಕಾರ್ಮಿಕರು ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುವ ಬಡ ವರ್ಗದ ಜನರು ಹೆಚ್ಚಾಗಿ ನೆಲೆಸಿರುವಂತ ಸ್ಥಳಗಳನ್ನು ಗಮನದಲ್ಲಿಟ್ಟುಕೊಂಡು ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸುವುದು ಅಧ್ಯಯನದ ಪ್ರಮುಖ ಕರ್ತವ್ಯವಾಗಿದೆ.

**ಆಹಾರ ಭದ್ರತೆಯ ವ್ಯಾಖ್ಯಾನಗಳು**

ಆಹಾರ ಭದ್ರತೆ ಎಂಬುದು ಸಮಗ್ರ ಮತ್ತು ವ್ಯಾಪಕವಾದ ಪರಿಕಲ್ಪನೆಯಾಗಿದ್ದು, ವಿವಿಧ ರೀತಿಯ ಅರ್ಥ ನಿರೂಪಣೆಯನ್ನು ಹೊಂದಿದೆ. ಸಾಮಾನ್ಯವಾಗಿ ಸಾಕಷ್ಟು ಪ್ರಮಾಣದ ಆಹಾರ ದೊರೆಯುವಿಕೆಯನ್ನು ಆಹಾರ ಭದ್ರತೆ ಎಂದು ಹೇಳಲಾಗುತ್ತದೆ. ಈ ನಿಟ್ಟಿನಲ್ಲಿ ಆಹಾರ ಭದ್ರತೆ ಕುರಿತಂತೆ ಪ್ರಮುಖವಾದ ವ್ಯಾಖ್ಯಾನಗಳನ್ನು ಈ ಕೆಳಗಿನಂತೆ ತಿಳಿಯಬಹುದು.

**1974 ವಿಶ್ವ ಆಹಾರ ಸಮ್ಮೇಳನದಲ್ಲಿ ಮೂಡಿಬಂದ ಅಭಿಪ್ರಾಯದಂತೆ:** ವಿಶ್ವದ ಆಹಾರ ಸೇವನೆಯನ್ನು ಸ್ಥಿರವಾಗಿರಿಸಿಕೊಂಡು ಎಲ್ಲಾ ಸಮಯದಲ್ಲೂ ಆಹಾರದ ಲಭ್ಯತೆಯನ್ನು ಕಾಪಾಡುವುದರ ಜೊತೆಗೆ ಮೂಲಭೂತವಾಗಿ ಬೇಡಿಕೆಗೆ ಅಗತ್ಯವಿರುವ ಆಹಾರ ಪದಾರ್ಥಗಳ ಉತ್ಪಾದನೆ ಮತ್ತು ಬೆಲೆಗಳ ಏರುಪೇರುಗಳನ್ನು ಸರಿದೂಗಿಸುವಿಕೆಯೇ 'ಆಹಾರ ಭದ್ರತೆ' ಎಂದು ತಿಳಿಸಲಾಗಿದೆ.

**1996 ವಿಶ್ವ ಆಹಾರ ಸಮಿತಿಯ ಪ್ರಕಾರ**

"ಎಲ್ಲಾ ಜನರಿಗೂ ಎಲ್ಲಾ ಕಾಲದಲ್ಲಿಯೂ, ಕ್ರಿಯಾಶೀಲವಾದ, ಆರೋಗ್ಯಕರವಾದ ಬದುಕನ್ನು ನಡೆಸಲು ಅವಶ್ಯಕವಿರುವಷ್ಟು, ಕ್ಷೇಮಕರವಾದ, ಪೋಷಕಾಂಶ ಪೂರಿತ ಆಹಾರ ದೊರಕುವುದೇ ಆಹಾರ ಭದ್ರತೆ", ಇದರಲ್ಲಿ ಆಹಾರ ವಸ್ತುಗಳ ಲಭ್ಯತೆ ಮತ್ತು ಕೊಳ್ಳುವ ಶಕ್ತಿ ಇವೆರಡು ಸೇರಿದೆ. ಕೇವಲ ಕುಟುಂಬಗಳ ನಡುವೆ ಆಹಾರ ಹಂಚಿಕೆ ಮಾತ್ರವಲ್ಲದೆ ಮನೆಯೊಳಗಿನ ಪ್ರತಿ ಸದಸ್ಯರಲ್ಲಿ ಮಹಿಳೆ, ಮಕ್ಕಳು ಮತ್ತು ವೃದ್ಧರು ಇವರ ನಡುವಿನ ಹಂಚಿಕೆಯೂ ಸೇರಿದೆ.

**ಅಧ್ಯಯನದ ಮಹತ್ವ**

ಬಡಜನರು ಸಹ ಅತ್ಯಂತ ಕಡಿಮೆ ಬೆಲೆಯಲ್ಲಿ ಒಳ್ಳೆಯ ಗುಣಮಟ್ಟ ಮತ್ತು ಪೌಷ್ಟಿಕಾಂಶಭರಿತವಾದ ಆಹಾರ ಸೇವಿಸಬೇಕು ಎಂಬ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟಿನ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಆದರೆ ಕ್ಯಾಂಟೀನ್‌ಗಳಲ್ಲಿ ಗುಣಮಟ್ಟವಿಲ್ಲದ ತರಕಾರಿ ಮತ್ತು ಕಾಳುಗಳನ್ನು ಬಳಸಿ, ರುಚಿ ಇಲ್ಲದ ಆಹಾರ ತಯಾರಿಸಿ ವಿತರಣೆ ಮಾಡಲಾಗುತ್ತಿದೆ ಜೊತೆಗೆ ಶುದ್ಧ ಕುಡಿಯುವ ನೀರಿಲ್ಲ ಮತ್ತು ಕ್ಯಾಂಟೀನ್ ಸುತ್ತಮುತ್ತಲಿನ ಪರಿಸರ ಶುದ್ಧತೆಯು ಇಲ್ಲ ಎಂಬ ಅಪವಾದ ಮತ್ತು ದೂರುಗಳ ಬಗ್ಗೆ ಮಾಧ್ಯಮಗಳಲ್ಲಿ ಆಗಾಗ ಚರ್ಚೆಗೆ ಒಳಪಟ್ಟಿದೆ. ಈ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್ ಯೋಜನೆಯ ಗುರಿ-ಉದ್ದೇಶಗಳು, ಅದರ ಕಾರ್ಯವೈಕರಿ ಹಾಗೂ ಅದರ ಸಾಧಕ--ಭಾಧಕಗಳ ಸತ್ಯಾ ಸತ್ಯತೆಗಳನ್ನು ರಾಜ್ಯದ ಜನ ಸಾಮಾನ್ಯರು ಅರಿಯಲು ಈ ಅಧ್ಯಯನ ಅತ್ಯಂತ ಮಹತ್ವದಾಗಿದೆ.

**ಅಧ್ಯಯನದ ಉದ್ದೇಶಗಳು**

- ಆಹಾರ ಸೇವನೆಗೆ ಬರುವ ಜನರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ತಿಳಿಯುವುದು.
- ಕ್ಯಾಂಟೀನ್‌ನಲ್ಲಿ ವಿತರಿಸುವ ಆಹಾರದ ಗುಣಮಟ್ಟ, ನೈರ್ಮಲ್ಯ ಹಾಗೂ ಸಿಬ್ಬಂದಿಗಳ ಕಾರ್ಯವೈಕರಿಯ ಬಗ್ಗೆ ಜನಾಭಿಪ್ರಾಯವನ್ನು ತಿಳಿಯುವುದು.

**ಅಧ್ಯಯನ ಕ್ಷೇತ್ರ**

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ, ಪ್ರವಾಸಿಗರ ಅಚ್ಚುಮೆಚ್ಚಿನ ತಾಣ ಎಂದು ಕರೆಯಲಾಗುವ ಮೈಸೂರು ಐತಿಹಾಸಿಕವಾಗಿ ಪರಂಪರೆಯುಳ್ಳ ಮತ್ತು ರಾಜ್ಯದ ಎರಡನೇ ಅತಿದೊಡ್ಡ ನಗರವೆಂಬ ಪ್ರಖ್ಯಾತಿಯನ್ನು ಪಡೆದಿದೆ. ಮೈಸೂರು ನಗರದಲ್ಲಿ ಒಟ್ಟು 65 ವಾರ್ಡ್‌ಗಳಿದ್ದು, 11 ವಾರ್ಡ್‌ಗಳಲ್ಲಿ ಕ್ಯಾಂಟೀನ್‌ಗಳನ್ನು ನಿರ್ಮಾಣಮಾಡಲಾಗಿದೆ.

ದಿನನಿತ್ಯ ಸಾವಿರಾರು ದಿನಗೂಲಿ ಕಾರ್ಮಿಕರು, ಇತರೆ ಕ್ಷೇತ್ರಗಳಲ್ಲಿ ದುಡಿಯುವ ವಿವಿಧ ಉದ್ಯೋಗಿಗಳು, ವಿದ್ಯಾರ್ಥಿಗಳು ಮತ್ತು ಹಲವು ಬಗೆಯ ಕೆಲಸ ಕಾರ್ಯಗಳಿಗೆ ಸಂಚಾರ ಮಾಡುವ ಸಾವಿರಾರು ಜನರಿಗೆ ಮೈಸೂರಿನಲ್ಲಿ ಸರ್ಕಾರ ಆರಂಭಿಸಿರುವ ಇಂದಿರಾ ಕ್ಯಾಂಟೀನ್‌ಗಳು ಹೇಗೆ ಜನಪರವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುವುದನ್ನು ಅರಿಯಲು ಮೈಸೂರು ನಗರವನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಮೈಸೂರು ನಗರವ್ಯಾಪ್ತಿಯಲ್ಲಿ ಒಟ್ಟು 11 ಇಂದಿರಾ ಕ್ಯಾಂಟೀನ್‌ಳಿದ್ದು. ಅಧ್ಯಯನದ ಅನುಕೂಲಕ್ಕಾಗಿ ಆಹಾರ ಸೇವಿಸಲು ಬರುವ 200 ಜನರನ್ನು ಉದ್ದೇಶಿತ ಮಾದರಿ ವಿಧಾನದ ಮೂಲಕ ಆಯ್ಕೆಮಾಡಿಕೊಳ್ಳಲಾಗಿದೆ.

**ಮಾಹಿತಿ ಸಂಗ್ರಹಣೆ:** ಪ್ರಸ್ತುತ ಅಧ್ಯಯನದ ಪ್ರಾಥಮಿಕ ಮಾಹಿತಿಗಾಗಿ ಪ್ರಶ್ನಾವಳಿ ಅನುಸೂಚಿ, ಸಂದರ್ಶನ ಹಾಗೂ ಅವಲೋಕನ ವಿಧಾನಗಳನ್ನು ಬಳಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಧ್ಯಮಿಕ ಮೂಲ:** ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಾದ ಪರಾಮರ್ಶನ ಗ್ರಂಥಗಳು, ಲೇಖನಗಳು, ಸಮೀಕ್ಷೆಗಳು, ಸಂಶೋಧನಾ ವರದಿಗಳು, ಸರ್ಕಾರದ ಇಲಾಖೆ ಹೊರಡಿಸಿರುವ ಕೈಪಿಡಿಗಳು ಹಾಗೂ ಸರ್ಕಾರಿ ಮತ್ತು ಅರೆಸರ್ಕಾರಿ ಕಛೇರಿಗಳಿಂದ ಪಡೆದ ಮಾಹಿತಿಗಳು, ದಿನ ಪತ್ರಿಕೆಗಳ ವರದಿಗಳು ಮತ್ತು ಅಂತರ್ಜಾಲ ಇತ್ಯಾದಿ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ**

ಸಂಗ್ರಹಿಸಿದ ದತ್ತಾಂಶವನ್ನು ಸೂಕ್ತ ಸಂಖ್ಯಾಶಾಸ್ತ್ರೀಯ ವಿಧಾನವನ್ನು ಬಳಸಿ ಮಾಹಿತಿ ವಿಶ್ಲೇಷಣೆಮಾಡಿ ಅವುಗಳ ಗುಣಲಕ್ಷಣಗಳಿಗನುಣವಾಗಿ ವರ್ಗೀಕರಿಸಿ, ವರ್ಗೀಕರಿಸಿದ ಮಾಹಿತಿಯನ್ನು ಕೋಷ್ಟಕ ಮತ್ತು ಚಾರ್ಟ್‌ಗಳ ಮೂಲಕ ವಿವರಿಸಲಾಗಿದೆ.

**ಸಾಹಿತ್ಯಾವಲೋಕನ**

ತಂಗಮಣಿ. ಎಸ್ ಮತ್ತು ಮುರುಗತಮ್. ಎಂ ಅವರುಗಳು (2013) ರಲ್ಲಿ ಸೇಲಂನ ಅಮ್ಮಾ ಕ್ಯಾಂಟೀನ್‌ಗಳ ಮೇಲೆ ನಡೆಸಿದ ಸಮೀಕ್ಷೆಯಲ್ಲಿ ಶೇಕಡ 75 ರಷ್ಟು ಗ್ರಾಹಕರು ಆಹಾರದ ಗುಣಮಟ್ಟದಿಂದ, ಶೇಕಡ 44 ರಷ್ಟು ಕುಡಿಯುವ ನೀರು ಮತ್ತು ಶೇಕಡ 58 ರಷ್ಟು ಜನರು ಆಹಾರ ಸಂಗ್ರಹಣೆಯಿಂದ ತೃಪ್ತರಾಗಿದ್ದಾರೆ ಎಂದು ತಿಳಿಸಿದ್ದಾರೆ. ಅವರು ಸಮೀಕ್ಷೆಗೆ ಒಳಪಡಿಸದ ಶೇಕಡ 58 ರಷ್ಟು ಜನರ ಆದಾಯ ರೂ 5001 ರಿಂದ

10,000 ಒಳಗಿದೆ. ಹಾಗೆಯೇ ಅವರಲ್ಲಿ ಶೇಕಡ 35ರಷ್ಟು ಜನರು ವಾರದಲ್ಲಿ 4–6 ದಿನಗಳು ಕ್ಯಾಂಟೀನ್‌ಗಳಿಗೆ ಭೇಟಿ ನೀಡುತ್ತಾರೆ ಎಂಬುದು ಅವರ ಅಭಿಪ್ರಾಯವಾಗಿದೆ. ಚೆನ್ನೈನಲ್ಲಿ 400 ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ 250 ಅಮ್ಮಾ ಕ್ಯಾಂಟೀನ್‌ಗಳಿಗೆ ಈಜಿಪ್ಟ್‌ನಂತಹ ವಿದೇಶಗಳ ಅಧಿಕಾರಿಗಳು ಭೇಟಿ ಮಾಡಿ ಅಧ್ಯಯನ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.

ಬಿ.ಬಿ.ಸಿ ವರದಿ. (2017) ರಲ್ಲಿ ಗೀತಾ ಪಾಂಡೆ ಎಂಬುವರ ನೆತೃತ್ವದಲ್ಲಿ ಬ್ರಿಟಿಷ್ ಸುದ್ಧಿವಾಹಿನಿಯ ತಂಡವು ತಮಿಳುನಾಡಿನ ಅಮ್ಮ ಕ್ಯಾಂಟೀನ್ ಹಾಗೂ ಕರ್ನಾಟಕದ ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿಮಾಡಿ ತಾವೆ ಸ್ವತಹ ಆಹಾರ ಸೇವಿಸುವುದರ ಜೊತೆಗೆ ಕ್ಯಾಂಟೀನ್‌ಗಳಿಗೆ ಆಹಾರ ಸೇವನೆಗೆ ಬರುವ ಜನರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ವರದಿ ನೀಡಿದ್ದಾರೆ. ಇವರ ಪ್ರಕಾರ ಕೇವಲ 5 ರೂಗಳಿಗೆ ಬೆಳಗಿನ ತಿಂಡಿ ಸಿಗಲಿದ್ದು, ಈ ಮುಂಚೆ 30 ರೂಪಾಯಿ ಖರ್ಚು ಮಾಡುತ್ತಿದ್ದರು. ಒಂದು ದಿನಕ್ಕೆ 25 ರೂಪಾಯಿಯನ್ನು ಉಳಿಸುವಂತಾಗಿದೆ. ಮೂರು ಹೊತ್ತಿನ ಊಟಕ್ಕೆ ಸುಮಾರು 140 ರೂಗಳನ್ನು ಖರ್ಚು ಮಾಡುತ್ತಿದ್ದರು. ಇದೀಗ ಕೇವಲ 40 ರೂಪಾಯಿಗೆ ಮೂರು ಹೊತ್ತಿನ ಊಟ ಸಿಗುತ್ತಿದೆ ಹಾಗಾಗಿ ದಿನಕ್ಕೆ 100 ರೂಪಾಯಿಗಳಷ್ಟು ಉಳಿತಾಯ ಮಾಡುತ್ತಿದ್ದಾರೆ. ಇದರಿಂದ ಬಡ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ ಎಂಬುದು ಬಿ.ಬಿ.ಸಿ ಸುದ್ದಿವಾಹಿನಿಯ ವಿಶ್ಲೇಷಣೆಯಾಗಿದೆ ಜೊತೆಗೆ ಅಮ್ಮ ಕ್ಯಾಂಟೀನ್ ಉತ್ತಮ, ಇಂದಿರಾ ಕ್ಯಾಂಟೀನ್ ಅತ್ಯುತ್ತಮ ಎಂದು ಉಲ್ಲೇಖಿಸಿದ್ದಾರೆ.

Sanapala V L N Uday Kumar and Bonu Manjula ಅವರುಗಳು (2018) ರಲ್ಲಿ Beneficiaries" Perception towards "Anna Canteen": A Study in Visakhapatnam District, Andhra Pradesh ಎಂಬ ವಿಷಯವಾಗಿ ಅಧ್ಯಯನ ಮಾಡಿದ್ದು, ತಮ್ಮ ಲೇಖನದಲ್ಲಿ ತಿಳಿಸಿರುವ ಪ್ರಕಾರ ಅಣ್ಣ ಕ್ಯಾಂಟೀನ್ ಯೋಜನೆಯು ವಿಶಾಖಪಟ್ಟಣ ಜಿಲ್ಲೆಯ ಕಾರ್ಮಿಕ ಮತ್ತು ಬಡ ವರ್ಗದ ಜನರಿಗೆ ಅತ್ಯಂತ ರಿಯಾಯಿತಿ ದರದಲ್ಲಿ ಆಹಾರ ವಿತರಣೆ ಮಾಡುತ್ತಿರುವುದು ಒಂದು ಸಕರಾತ್ಮಕವಾದ ಯೋಜನೆಯೆಂಬುದು ಬಹಳ ಸ್ಪಷ್ಟವಾಗಿದ್ದು ಈ ಯೋಜನೆಯು ದೇಶದ ಇತರೆ ರಾಜ್ಯಗಳಿಗೆ ಮಾದರಿ ಎಂದಿದ್ದಾರೆ. ಜೊತೆಗೆ ಅಣ್ಣ ಕ್ಯಾಂಟೀನ್‌ಗೆ ಶೇಕಡ 68 ರಷ್ಟು ಜನರು ಪ್ರತಿದಿನ ತಪ್ಪದೆ ನಿರಂತರವಾಗಿ ಆಹಾರ ಸೇವಿಸಲು ಬರುತ್ತಿರುವುದು ಗಮನಾರ್ಹವಾದ ಅಂಶವಾಗಿದೆ ಎಂದಿದ್ದಾರೆ. ಹಾಗೆಯೇ ಈ ಯೋಜನೆಯು ಕೇವಲ ನಗರ ಪ್ರದೇಶಗಳಿಗೆ ಸಿಮೀತವಾಗಿದೆ ಮುಂದೆ ಸಾಧ್ಯವಾದರೆ ಸರ್ಕಾರ ಬುಡಕಟ್ಟು ಮತ್ತು ಗ್ರಾಮೀಣ ಪ್ರದೇಶಗಳಿಗಲ್ಲೂ ಕ್ಯಾಂಟೀನ್ ತೆರೆಯುವ ಮೂಲಕ ಗ್ರಾಮೀಣ ಮಟ್ಟದಲ್ಲಿ ಆಹಾರ ವಿತರಣಾ ಸೇವೆಯನ್ನು ವಿಸ್ತರಿಸಿ ಎಂದಿದ್ದಾರೆ. ಹಾಗೆಯೇ ಕರ್ನಾಟಕದ ಇಂದಿರಾ ಕ್ಯಾಂಟೀನ್ ಯೋಜನೆಯು ರಾಜ್ಯದ ಬಡ ಜನರ ಹಸಿವು ನಿಗಿಸುವ ಕಾರ್ಯಕ್ರಮವಾಗಿದೆ. ಅದರಲ್ಲೂ ಬಹುಮುಖ್ಯವಾಗಿ ಆಟೋರಿಕ್ಷಾ ಚಾಲಕರು, ವಿದ್ಯಾರ್ಥಿಗಳು, ಕಟ್ಟಡ ಕೂಲಿ ಕಾರ್ಮಿಕರ ಹಾಗೂ ಕೌಶಲ್ಯರಹಿತ ದಿನಗೂಲಿ ಕಾರ್ಮಿಕರಿಗೆ ಆಹಾರ ಭದ್ರತೆ ಖಾತ್ರಿಪಡಿಸುವಲ್ಲಿ ಒಂದು ಪರಿಣಾಮಕಾರಿ ಜನಪ್ರೀಯ ಯೋಜನೆಯಾಗಿದೆ. ಕ್ಯಾಂಟೀನ್ ನಿರ್ವಹಣೆಯಲ್ಲಿ ಕಂಡುಬರುವ ಸಣ್ಣ–ಪುಟ್ಟ ದೋಷಗಳನ್ನು ಸರಿಪಡಿಸಿಕೊಂಡು ಈ ಯೋಜನೆಯನ್ನು ಮುಂದುವರಿಸಬೇಕು ಎಂಬುದಾಗಿ ತಿಳಿಸಿದ್ದಾರೆ.

Dr. Mutluri Abraham ಅವರು (2019) NTR Anna Canteens: A Boon to Urban Poor of Andhra Pradesh, India ಎಂಬ ವಿಷಯವಾಗಿ ತಮ್ಮ ಲೇಖನದಲ್ಲಿ ತಿಳಿಸಿರುವಂತೆ ಎನ್.ಟಿ.ಆರ್ ಅಣ್ಣ ಕ್ಯಾಂಟೀನ್ ತೆಲುಗು ದೇಶಂ ಪಕ್ಷದ ಈ ಕಾರ್ಯಕ್ರಮ ಆಂಧ್ರಪ್ರದೇಶದಲ್ಲಿ ಒಂದು ಅತ್ಯುತ್ತಮ ಯೋಜನೆಯಾಗಿದೆ. ಇದು ತನ್ನ ಗುರಿ ಉದ್ದೇಶಗಳನ್ನು ತಲುಪುವಲ್ಲಿ ಸಫಲವಾಗಿದೆ. ಅಣ್ಣ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರು ಆಹಾರ ಗುಣಮಟ್ಟ ಮತ್ತು ಪ್ರಮಾಣಕ್ಕೆ ಸಂಬಂಧಿಸಿದಂತೆ ಒಳ್ಳೆಯ ಅಭಿಪ್ರಾಯವನ್ನು ತಿಳಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಹೋಟೆಲ್‌ಗಳಲ್ಲಿ ಹೆಚ್ಚಿನ ಬೆಲೆ ನೀಡಿ ಆಹಾರ ಸೇವಿಸುತ್ತಿದ್ದ ಬಡಜನರು, ನಿರುದ್ಯೋಗಿ ಯುವಕರು, ವಿದ್ಯಾರ್ಥಿಗಳು ಕೇವಲ 5 ರೂಪಾಯಿಗಳಿಗೆ ರುಚಿಕರವಾದ ಊಟವನ್ನು ಮಾಡಲು ಸಾಧ್ಯವಾಗುತ್ತಿರುವುದು ತುಂಬ ಸಂತಸದ ವಿಷಯವಾಗಿದೆ ಎಂದಿದ್ದಾರೆ. ಜೊತೆಗೆ ಪ್ರತಿಕ್ರಿಯಿಸಿದವರರಲ್ಲಿ ಕೆಲವು ಜನರು ಪಾರ್ಸೆಲ್ ಸೇವೆಯನ್ನು ಪ್ರಾರಂಭಿಸಲು ವಿನಂತಿಸಿದ್ದಾರೆ. ಅವರಲ್ಲಿ ವಯಸ್ಸಾದವರು, ಅಂಗವಿಕಲರು, ರೋಗಿಗಳು, ಮತ್ತು ಮಹಿಳೆಯರು ಕ್ಯಾಂಟೀನ್‌ಗೆ ಬರಲು ಹಾಗೂ ಸರತಿ ಸಾಲಿನಲ್ಲಿ ಸುಮಾರು ಅರ್ಧ ತಾಸು ನಿಲ್ಲಲು ಸಾಧ್ಯವಾಗದ ಕಾರಣ ಪಾರ್ಸೆಲ್ ಸೇವೆ ಬೇಕು ಎಂಬುದು ಫಲಾನುಭವಿಗಳ ವಿನಂತಿಯಾಗಿದೆ. ಹಾಗೆಯೇ ಅಣ್ಣ ಕ್ಯಾಂಟೀನ್ ಕಾರ್ಯಕ್ರಮದ ಬಗ್ಗೆ ಇನ್ನೂ ಹೆಚ್ಚಿನ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದ್ದಾರೆ.

**ಮಾಹಿತಿ ವಿಶ್ಲೇಷಣೆ**

**ಕೋಷ್ಟಕ. 1:** ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರ ಜಾತಿವಾರು ವಿವರ:

| ಜಾತಿ ವಿವರ | ಆವೃತಿ | ಶೇಕಡ |
|---|---|---|
| ಎಸ್.ಸಿ | 52 | 26% |
| ಎಸ್.ಟಿ | 20 | 10% |
| ಓ.ಬಿ.ಸಿ | 111 | 55.5% |
| ಸಾಮಾನ್ಯ | 17 | 8.5% |
| **ಒಟ್ಟು** | 200 | 100% |

ಕೋಷ್ಟಕ 1 ರಲ್ಲಿ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರ ಜಾತಿವಾರು ಅಂಕಿ ಅಂಶಗಳನ್ನು ಒಳಗೊಂಡಿದ್ದು, ಶೇಕಡ 26 ರಷ್ಟು ಪರಿಶಿಷ್ಟ ಜಾತಿಯ ಜನರು, ಶೇಕಡ. 10 ರಷ್ಟು ಪರಿಶಿಷ್ಟ ಪಂಗಡದ ಜನರು ಆಹಾರ ಸೇವಿಸಲು ಬಂದರೆ, ಶೇಕಡ 55.5 ರಷ್ಟು ಇತರೆ ಹಿಂದುಳಿದ ವರ್ಗದ ಜನರು ಮತ್ತು ಶೇಕಡ 8.5 ರಷ್ಟು ಸಾಮಾನ್ಯ ವರ್ಗದ ಜನರು ಆಹಾರ ಸೇವಿಸಲು ಬರುವುದಾಗಿ ತಿಳಿಸಿದ್ದಾರೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಅತ್ಯಂತ ಕಡಿಮೆ ಬೆಲೆಗೆ ಆಹಾರ ನೀಡುವ ಇಂದಿರಾ ಕ್ಯಾಂಟೀನ್ ಯೋಜನೆಯ ಪ್ರತಿಫಲವನ್ನು ಎಲ್ಲ ವರ್ಗಗಳ ಜನರು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅದರಲ್ಲಿ ಅತಿ ಹಿಂದುಳಿದ ವರ್ಗದ ಜನರು ಯೋಜನೆಯ ಹೆಚ್ಚಿನ ಫಲಾನುಭವಿಗಳಾಗಿದ್ದಾರೆ ಎಂಬುದು ಗಮನಾರ್ಹ ಅಂಶವಾಗಿದೆ.




**ಚಾರ್ಟ್. 1:** ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರ ಉದ್ಯೋಗದ ವಿವರ.

ಚಾರ್ಟ್ 1 ರಲ್ಲಿ ತಿಳಿಸಿರುವಂತೆ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವವರಲ್ಲಿ ಶೇಕಡ 44 ರಷ್ಟು ಜನರು ತಮ್ಮ ಉದ್ಯೋಗ ಕೂಲಿ ಎಂದು ತಿಳಿಸಿದರೆ, ಶೇಕಡ 6 ರಷ್ಟು ಜನರು ವ್ಯವಸಾಯ ಎಂದು ತಿಳಿಸಿದ್ದಾರೆ. ಇನ್ನು ಶೇಕಡ 2 ರಷ್ಟು ಸರ್ಕಾರಿ ನೌಕರ ಎಂದರೆ, ಶೇಕಡ 16. ಜನರು ಖಾಸಗಿ ಕಂಪನಿಯಲ್ಲಿ ವೃತ್ತಿ ಮಾಡುವುದಾಗಿ ತಿಳಿಸಿದ್ದಾರೆ. ಹಾಗೆಯೇ ಶೇಕಡ 9.5 ರಷ್ಟು ವಿದ್ಯಾರ್ಥಿಗಳಾಗಿದ್ದು, ಶೇಕಡ 22 ರಷ್ಟು ಜನರು ಇತರೆ ಉದ್ಯೋಗ ಮಾಡುವುದಾಗಿ ತಿಳಿಸಿದ್ದಾರೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಅತಿ ಹೆಚ್ಚು ಕೂಲಿ ಕಾರ್ಮಿಕರು, ನಿರ್ಗತಿಕರು ಹಾಗೂ ಬಡಜನರು ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುತ್ತಾರೆ ಎಂಬುದು ಈ ಅಧ್ಯಯನದಿಂದ ತಿಳಿದುಬಂದಿದೆ.




**ಚಾರ್ಟ್ 2:** ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರ ದಿನ ನಿತ್ಯದ ಆದಾಯದ ವಿವರ (ರೂಪಾಯಿಗಳಲ್ಲಿ).

ಈ ಮೇಲಿನ ಪೈ ಚಾರ್ಟ್ 2 ರಲ್ಲಿ ಶೇಕಡ 46 ರಷ್ಟು ಜನರು ತಮ್ಮ ದಿನದ ಆದಾಯ 100 ರಿಂದ 200 ರೂಪಾಯಿಗಳು ಎಂದು ತಿಳಿಸಿದರೆ, ಶೇಕಡ 22 ರಷ್ಟು ಜನರು 201 ರಿಂದ 300 ರೂಪಾಯಿಗಳು ಎಂದು ತಿಳಿಸಿದ್ದಾರೆ. ಹಾಗೆಯೇ ಶೇಕಡ 8 ರಷ್ಟು ಜನರು ತಮ್ಮ ದಿನದ ಆದಾಯ 301 ರಿಂದ 400 ರೂಪಾಯಿಗಳು ಎಂಬುದಾಗಿ ಹೇಳಿದ್ದಾರೆ. ಇನ್ನು ಶೇಕಡ 14 ರಷ್ಟು ಜನರು ತಮ್ಮ ದಿನದ ಆದಾಯ 401 ರೂಪಾಯಿಗಿಂತಲೂ ಅಧಿಕವಾಗಿದೆ ಎಂದು ತಿಳಿಸಿದರೆ, ಶೇಕಡ 10 ರಷ್ಟು ಜನರು ತಮಗೆ ದಿನದ ಆದಾಯವಿಲ್ಲ ಎಂದು ತಿಳಿಸಿದ್ದಾರೆ. ಒಟ್ಟಾರೆ ಅಂಕಿ ಅಂಶಗಳನ್ನು ನೋಡಿದಾಗ ಅತಿ ಹೆಚ್ಚು ಜನರ ದಿನದ ಅತ್ಯಂತ ಕಡಿಮೆ ಇದೆ. ಜೊತೆಗೆ ಅವರ ವಾರ್ಷಿಕ ಆದಾಯ ಬಡತನ ರೇಖೆಗಿಂತ ಕಡಿಮೆ ಇದೆ. ಇನ್ನು ಶೇಕಡ 9.5 ರಷ್ಟು ವಿದ್ಯಾರ್ಥಿಗಳು ಮತ್ತು ಶೇಕಡ 5 ರಷ್ಟು ಜನರು ಯಾವುದೇ ಆದಾಯವನ್ನು ಹೊಂದಿಲ್ಲ ಎಂಬುದು ಈ ಅಧ್ಯಯನದಿಂದ ತಿಳಿದುಬಂದಿದೆ.

**ಕ್ಯಾಂಟೀನ್ ವೇಳಪಟ್ಟಿ**

ಬಡಜನರ ಹಸಿವು ನೀಗಿಸುವ ಸಲುವಾಗಿ ಜಾರಿಗೆ ತಂದಿರುವ ಈ ಇಂದಿರಾ ಕ್ಯಾಂಟೀನ್ ಒಂದು ದಿನದಲ್ಲಿ ಮೂರು ಹೊತ್ತು ಆಹಾರ ವಿತರಿಸುತ್ತದೆ. ಬೆಳಗ್ಗೆ 7.30 ರಿಂದ 10.30 ರವರಗೆ ತಿಂಡಿ ವಿತರಣೆ, ಮಧ್ಯಾಹ್ನ 12.30 ರಿಂದ 2.30 ತನಕ ಮಧ್ಯಾಹ್ನದ ಊಟ ವಿತರಣೆ ಮತ್ತು ರಾತ್ರಿ 7.30 ರಿಂದ 9.30 ರವರಗೆ ಊಟ ಲಭ್ಯವಿರುತ್ತದೆ. ಸರ್ಕಾರ ನಿಗದಿ ಮಾಡಿರುವ ಸಮಯಕ್ಕೆ ಸರಿಯಾಗಿ ಬರುವವರಿಗೆ ಆಹಾರ ವಿತರಿಸುತ್ತದೆ. ಈ ಹಿನ್ನೆಲೆಯಲ್ಲಿ ಜನರು ಆಹಾರ ಸೇವಿಸಲು ಒಂದು ದಿನಕ್ಕೆ ಎಷ್ಟು ಬಾರಿ ಭೇಟಿ ಮಾಡುತ್ತಾರೆ ಎನ್ನುವುದನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 2:** ಇಂದಿರಾ ಕ್ಯಾಂಟೀನ್‌ಗೆ ಆಹಾರ ಸೇವಿಸಲು ಭೇಟಿ ನೀಡುವ ಅವಧಿಯ ವಿವರ:

| ಭೇಟಿಯ ವಿವರ | ಆವೃತಿ | ಶೇಕಡ |
|---|---|---|
| ದಿನಕ್ಕೆ 1 ಬಾರಿ | 84 | 42% |
| ದಿನಕ್ಕೆ 2 ಬಾರಿ | 40 | 20% |
| ದಿನಕ್ಕೆ 3 ಬಾರಿ | 8 | 4% |
| ಆಗ್ಗಾಗೆ, ಅನಿರೀಕ್ಷಿತ | 68 | 34% |
| **ಒಟ್ಟು** | 200 | 100% |

ಈ ಮೇಲಿನ ಕೋಷ್ಟಕ 2 ರಲ್ಲಿ ತಿಳಿಸಿರುವಂತೆ ಶೇಕಡ 42 ರಷ್ಟು ಜನರು ದಿನಕ್ಕೆ ಒಂದು ಬಾರಿ ಆಹಾರ ಸೇವಿಸಲು ಬರುವುದಾಗಿ ತಿಳಿಸಿದರೆ, ಶೇಕಡ 20 ರಷ್ಟು ಜನರು ದಿನದಲ್ಲಿ ಎರಡು ಬಾರಿ ಬರುವುದಾಗಿ ತಿಳಿಸಿದ್ದಾರೆ. ಇನ್ನು ಶೇಕಡ 4 ರಷ್ಟು ಜನರು ದಿನಕ್ಕೆ ಮೂರು ಬಾರಿ ಬಂದರೆ, ಶೇಕಡ 34 ರಷ್ಟು ಜನರು ಆಗ್ಗಾಗೆ, ಅನಿರೀಕ್ಷಿತವಾಗಿ ಆಹಾರ ಸೇವಿಸಲು ಬರುವುದಾಗಿ ತಿಳಿಸಿದ್ದಾರೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಶೇಕಡ 42 ರಷ್ಟು ಜನರು ದಿನಕ್ಕೆ ಒಂದು ಸಲ ಭೇಟಿ ನೀಡಿದರೆ, ಶೇಕಡ 34 ರಷ್ಟು ಅನಿವಾರ್ಯ ಹಾಗೂ ಅನಿರೀಕ್ಷಿತವಾಗಿ ಬರುತ್ತಾರೆ. ಅವರಲ್ಲಿ ಅಟೋ ಚಾಲಕರು, ಖಾಸಗಿ ಕಂಪನಿಗಳ ನೌಕರರು ಮತ್ತು ವಿದ್ಯಾರ್ಥಿಗಳು ಹಾಗೇ ದಿನಕ್ಕೆ 2 ಅಥವಾ 3 ಬಾರಿ ಆಹಾರ ಸೇವಿಸಲು ಬರುವವರಲ್ಲಿ ಕಟ್ಟಡ ಕೂಲಿ ಕಾರ್ಮಿಕರು ಹೆಚ್ಚಿನವರಾಗಿದ್ದಾರೆ.

**ಆಹಾರದ ಗುಣಮಟ್ಟ**

ಉತ್ತಮ ಗುಣಮಟ್ಟದ ಆಹಾರ, ಸುರಕ್ಷಿತ ಹಾಗೂ ಶುಚಿಯಾದ ಆಹಾರವನ್ನು ನೀಡುವುದು ಪ್ರತಿಯೊಬ್ಬ ಆಹಾರ ಪದಾರ್ಥ ಮಾರಾಟಗಾರನ ಕರ್ತವ್ಯವಾಗಿರುತ್ತದೆ. ಆಹಾರ ತಯಾರಿಸುವ ಪ್ರತಿಯೊಂದು ಘಟಕವು ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದು ಆಹಾರ ತಯಾರಿಸಿ ಮಾರುವುದು ಕಡ್ಡಾಯ ಇಲ್ಲದೇ ಹೋದಲ್ಲಿ ಅಂಥ ಘಟಕ/ ಆಹಾರ ವಿತರಿಸುವ ಕೇಂದ್ರವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆ. ಅತ್ಯಂತ ಕಡಿಮೆ ದರದಲ್ಲಿ ಉಪಹಾರ ಮತ್ತು ಊಟ ವಿತರಿಸುವ ಇಂದಿರಾ ಕ್ಯಾಂಟೀನಲ್ಲಿ ನೀಡುತ್ತಿರುವ ಆಹಾರದ

ಗುಣಮಟ್ಟದ ಬಗ್ಗೆ ಜನರು ಯಾವ ಬಗೆಯ ಅಭಿಪ್ರಾಯಗಳನ್ನು ನೀಡಿದ್ದಾರೆ ಎಂಬುವುದನ್ನು ಈ ಕೆಳಗಿನ ಪೈ ಚಾರ್ಟ್‌ನಲ್ಲಿ ನೋಡಬಹುದು.




**ಚಾರ್ಟ್ 3:** ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಆಹಾರದ ಗುಣಮಟ್ಟ ಬಗ್ಗೆ ಜನಾಭಿಪ್ರಾಯ.

ಮೇಲಿನ ಪೈ ಚಾರ್ಟ್ 3 ರಲ್ಲಿ ತಿಳಿಸಿರುವಂತೆ ಶೇಕಡ 27 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಉಪಹಾರ ಮತ್ತು ಊಟದ ಗುಣಮಟ್ಟ ಅತ್ಯುತ್ತಮವಾಗಿದೆ ಎಂದು ತಿಳಿಸಿದರೆ, ಶೇಕಡ 50 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಆಹಾರ ಗುಣಮಟ್ಟ ಉತ್ತಮವಾಗಿದೆ ಎಂದು ತಿಳಿಸಿದ್ದಾರೆ. ಹಾಗೆಯೇ ಶೇಕಡ 20 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಆಹಾರ ಸಾಧರಣವಾಗಿದೆ ಎಂದು ತಿಳಿಸಿದರೆ, ಶೇಕಡ 3 ರಷ್ಟು ಜನರು ಕಳಪೆ ಎಂದು ತಿಳಿಸಿದ್ದಾರೆ. ಒಟ್ಟಾರೆ ಅಂಕಿ ಅಂಶಗಳನ್ನು ಗಮನಿಸಿದಾಗ ಅತಿ ಹೆಚ್ಚು ಜನರು ಕ್ಯಾಂಟೀನ್‌ನಲ್ಲಿ ದೊರೆಯುವ ಆಹಾರದ ಗುಣಮಟ್ಟ ಉತ್ತಮವಾಗಿದೆ ಎಂದು ತಿಳಿಸಿದ್ದಾರೆ. ಇನ್ನುಳಿದಂತೆ ಕ್ಯಾಂಟೀನ್ ಪ್ರಾರಂಭವಾದ ಸಂದರ್ಭದಲ್ಲಿ ಎಲ್ಲವೂ ಚನ್ನಾಗಿತ್ತು ಬರುಬರುತ್ತ ಗುಣಮಟ್ಟದಲ್ಲಿ ಏರುಪೇರಾಗಿ ಬೆಳಗಿನ ಉಪಹಾರವಾಗಲಿ ಅಥವಾ ಮಧ್ಯಾಹ್ನ ಊಟ ಹಾಗೂ ರಾತ್ರಿಯ ಊಟವಾಗಲಿ ಅದರ ಗುಣಮಟ್ಟ ಅಷ್ಟಕಷ್ಟೇ ಈ ಹಿಂದಿನಷ್ಟು ರುಚಿ ಇಲ್ಲ ಎಂದು ತಿಳಿಸಿದ್ದಾರೆ.

**ಕಾರ್ಯನಿರ್ವಹಿಸುವ ಸಿಬ್ಬಂದಿಗಳು:** ಸರ್ಕಾರ ಸ್ಥಾಪಿಸಲಾಗಿರುವ ಕ್ಯಾಂಟೀನ್‌ಗಳಿಗೆ ಆಹಾರ ತಯಾರಿಸಿ ಸಬರಾಜು ಮಾಡುವ ಹೊಣೆಯನ್ನು ವಿವಿಧ ಸಂಸ್ಥೆಗಳಿಗೆ ನೀಡಲಾಗಿದೆ. ಅಡುಗೆ ತಯಾರಕರನ್ನು ಆಯಾ ಪಾಲಿಕೆಗಳು, ಹಿರಿಯ ಅಧಿಕಾರಿಗಳು ನೇಮಿಸಿಕೊಳ್ಳುತ್ತಾರೆ. ಒಂದು ಕ್ಯಾಂಟೀನ್‌ನಲ್ಲಿ ಕ್ಯಾಷಿಯರ್, ಸೂಪರ್‌ವೈಸರ್, ವಾಚ್‌ಮೆನ್, ಸಪ್ಲೈಯರ್ ಮತ್ತು ಕ್ಲೀನರ್ ಸೇರಿದಂತೆ 7 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಾರೆ. ಒಂದು ಕ್ಯಾಂಟೀನ್‌ನಲ್ಲಿ ದಿನವೊಂದಕ್ಕೆ ಸುಮಾರು 500ಕ್ಕೂ ಹೆಚ್ಚು ಜನರಿಗೆ ಊಟ ಮತ್ತು ಉಪಹಾರ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕ್ಯಾಂಟೀನ್‌ನಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳ ಕಾರ್ಯವೈಕರಿಯ ಬಗ್ಗೆ ಜನರು ಯಾವ ಬಗೆಯ ಅಭಿಪ್ರಾಯ ನೀಡಿದ್ದಾರೆ ಎಂಬುವುದನ್ನು ನಕ್ಷೆ. 4 ರಲ್ಲಿ ತಿಳಿಸಲಾಗಿದೆ.




**ಚಾರ್ಟ್.4:** ಇಂದಿರಾ ಕ್ಯಾಂಟೀನ್‌ನಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಕಾರ್ಯವೈಕರಿ ಕುರಿತು ಫಲಾನುಭವಿಗಳ ಅಭಿಪ್ರಾಯ:

ಚಾರ್ಟ್ 4 ರಲ್ಲಿ ತಿಳಿಸಿರುವಂತೆ ಶೇಕಡ 18.5 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರೆ, ಶೇಕಡ 43.5 ರಷ್ಟು ಜನರು ಉತ್ತುವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ ಎಂದು ತಿಳಿಸಿದ್ದಾರೆ. ಹಾಗೆಯೇ ಶೇಕಡ 29.5 ರಷ್ಟು ಜನರು ಸಾಧಾರಣವಾಗಿ ಕೆಲಸ ನಿರ್ವಹಿಸುತ್ತಾರೆ ಎಂದು ತಿಳಿಸಿದ್ದಾರೆ.

ಇನ್ನು ಶೇಕಡ 8.5 ರಷ್ಟು ಜನರು ಕ್ಯಾಂಟೀನ್‌ನಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಕೆಲಸ ಕಾರ್ಯಗಳು ಉತ್ತಮವಾಗಿಲ್ಲ ಎಂದು ತಿಳಿಸಿದ್ದಾರೆ. ಒಟ್ಟಾರೆ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಇಂದಿರಾ ಕ್ಯಾಂಟೀನ್ ಸಿಬ್ಬಂದಿವರ್ಗಗಳಲ್ಲಿ ಶೇಕಡವಾರು ಹೆಚ್ಚಿನ ಜನರು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂಬುದಾಗಿ ತಿಳಿಸಿದ್ದಾರೆ ಕಾರಣ ಸರ್ಕಾರ ಕಾರ್ಯನಿರ್ವವಹಿಸುವ ಸಿಬ್ಬಂದಿಗಳು ಅನುಚಿತವಾಗಿ ವರ್ತಿಸಿದರೆ, ವಿವಿಧ ಬಗೆಯ ದಂಡವನ್ನು ವಿಧಿಸಲಾಗುತ್ತದೆ.

**ಮೂಲಭೂತ ಅಗತ್ಯತೆ:** ತಮಿಳುನಾಡಿನ ಮೂಲದ ಕೇಫ್ ಇನ್ ಪ್ರಾ ಸಂಸ್ಥೆಯು ಇಂದಿರಾ ಕ್ಯಾಂಟೀನ್ ಗುತ್ತಿಗೆ ಪಡೆದು ಸಿದ್ದಪಡಿಸಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಕಾಂಕ್ರೀಟ್ ಸಾಬ್ ನಿಂದ ನಿರ್ಮಿಸಿದ ಇಂದಿರಾ ಕ್ಯಾಂಟೀನ್ ಕಟ್ಟಡವನ್ನು ಕನಿಷ್ಟವೆಂದರು ಐವತ್ತು ವರ್ಷಗಳ ತನಕ ಬಳಸಬಹುದಾಗಿದೆ. ನಿರ್ಮಾಣ ಪ್ರದೇಶದ ಮಣ್ಣಿನ ಗುಣಮಟ್ಟವನ್ನು ಸಂಪೂರ್ಣವಾಗಿ ಪರೀಕ್ಷೆ ಮಾಡಿ ಎಲ್ಲಾ ರೀತಿಯ ಸುರಕ್ಷಿತ ಹಾಗೂ ಮೂಲಭೂತ ಅಗತ್ಯತೆಗಳನ್ನು ಒದಗಿಸಲಾಗಿದೆ ಎಂದು ಸರ್ಕಾರ ಹೇಳುತ್ತದೆ. ಈ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಜನರು ಯಾವ ಅಭಿಪ್ರಾಯ ನೀಡಿದ್ದಾರೆ ಎಂಬುದನ್ನು ಕೋಷ್ಟಕ 3 ರಲ್ಲಿ ತಿಳಿಯಬಹುದು.

**ಕೋಷ್ಟಕ 3:** ಇಂದಿರಾ ಕ್ಯಾಂಟೀನ್‌ನಲ್ಲಿರುವ ಮೂಲಭೂತ ಅಗತ್ಯತೆಗಳು ಮತ್ತು ಅದರ ಶುಚಿತ್ವದ ಬಗ್ಗೆ ಜನರ ಅಭಿಪ್ರಾಯ:

| ಮೂಲಭೂತ ಅಗತ್ಯತೆಗಳು | ಸ್ವಚ್ಛತೆ | | |
|---|---|---|---|
| | ಇದೆ | ಇಲ್ಲ | ಒಟ್ಟು |
| ಶುದ್ಧ ಕುಡಿಯುವ ನೀರು | 179 (89.5%) | 21 (10.5%) | 200 (100%) |
| ಊಟದ ಟೇಬಲ್ಸ್ | 163 (81.5%) | 37 (18.5%) | 200 (100%) |
| ಶುಚಿಗೊಳಿಸಿರುವ ಊಟದ ತಟ್ಟೆ, ಲೋಟ, ಅಡುಗೆ ಮತ್ತು ಆಹಾರ ಶೇಖರಣ ಸಾಮಾಗ್ರಿಗಳು | 189 (94.5%) | 21 (5.5%) | 200 (100%) |

ಕೋಷ್ಟಕ 3 ರಲ್ಲಿ ಕ್ಯಾಂಟೀನ್‌ನಲ್ಲಿರುವ ಅಗತ್ಯ ವಸ್ತುಗಳು ಮತ್ತು ಅವುಗಳ ಶುಚಿತ್ವಕ್ಕೆ ಸಂಬಂಧಿಸಿದಂತೆ ಶೇಕಡ 89.5 ರಷ್ಟು ಜನರು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ ಎಂದು ತಿಳಿಸಿದರೆ ಶೇಕಡ 10.5 ರಷ್ಟು ಜನರು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ ಎಂದು ತಿಳಿಸಿದ್ದಾರೆ. ಹಾಗೆಯೇ ಶೇಕಡ 81.5 ರಷ್ಟು ಜನರು ಕ್ಯಾಂಟೀನ್‌ನಲ್ಲಿ ನಿಂತುಕೊಂಡು ಊಟ ಸೇವಿಸುವ ಟೇಬಲ್ಸ್ ವ್ಯವಸ್ಥೆ ಶುಚಿತ್ವದಿಂದ ಇರುತ್ತದೆ ಎಂದು ತಿಳಿಸಿದರೆ, ಶೇಕಡ 18.5 ರಷ್ಟು ಜನರು ಶುಚಿತ್ವವಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಅಲ್ಲದೆ ಶೇಕಡ 94.5 ರಷ್ಟು ಜನರು ಕ್ಯಾಂಟೀನ್ ನಲ್ಲಿರುವ ಊಟದ ತಟ್ಟೆ, ಲೋಟ ಹಾಗೂ ಅಡುಗೆ ಮತ್ತು ಆಹಾರ ಶೇಖರಿಸುವ ಸಾಮಾಗ್ರಿಗಳು ಶುಚಿತ್ವದಿಂದ ಕೂಡಿರುತ್ತದೆ ಎಂದು ತಿಳಿಸಿದರೆ, ಶೇಕಡ 5.5 ರಷ್ಟು ಜನರು ಶುಚಿತ್ವದ ಕೊರತೆ ಇದೆ ಎಂಬುದಾಗಿ ತಿಳಿಸಿದ್ದಾರೆ.

**ಪರಿಸರ:** ಪರಿಸರ ಎಂಬುದು ಬಹಳ ವಿಶಾಲವಾದ ಅರ್ಥ ಹೊಂದಿದೆ. ನಾವು ಜೀವಿಸುವುದಕ್ಕೆ ಗಾಳಿ, ನೀರು, ಆಹಾರಗಳೆಂಬ ಮೂರು ಮೂಲಭೂತ ಅವಶ್ಯಕತೆಗಳು ಬೇಕು ಎಂಬುದನ್ನು ನಾವು ಚಿಕ್ಕವರಿದ್ದಾಗಿನಿಂದಲೂ ಅರಿತುಕೊಂಡು ಬಂದಿದೇವೆ ಪರಿಸರಕ್ಕೆ ವೈಜ್ಞಾನಿಕ ವ್ಯಾಖ್ಯೆ ನೀಡುವುದಾದರೆ ಜೀವಿಯ ಮೇಲೆ ಜೈವಿಕವಾಗಿ ಪರಿಣಾಮ ಬೀರುವಂಥ ಎಲ್ಲ ಬಾಹ್ಯ ಕಾರಣಗಳನ್ನು ಒಟ್ಟಾರೆ ಪರಿಸರ ಎಂದು ಕರೆಯಬಹುದು.

ಪರಿಸರ ಸಂರಕ್ಷಣೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಸುಂದರ ಸಮಾಜವನ್ನು ನಿರ್ಮಾಣ ಮಾಡಬಹುದು. ಈ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್‌ನ ಸುತ್ತಮುತ್ತಲ ಪರಿಸರ ಕುರಿತಂತೆ ಜನರು ಯಾವ ಬಗೆಯ ಅಭಿಪ್ರಾಯವನ್ನು ಹೊಂದಿದ್ದಾರೆ ಎಂಬುದನ್ನು ಕೋಷ್ಟಕ 4 ರಲ್ಲಿ ತಿಳಿಯಬಹುದು.

**ಕೋಷ್ಟಕ: 4:** ಕ್ಯಾಂಟೀನ್ ಸುತ್ತಮುತ್ತಲ ಪರಿಸರ:

| ಪರಿಸರ | ಆವೃತಿ | ಶೇಕಡ |
|---|---|---|
| ಉತ್ತಮವಾಗಿದೆ | 138 | 69% |
| ಉತ್ತಮವಾಗಿಲ್ಲ | 62 | 31% |
| **ಒಟ್ಟು** | 200 | 100% |

ಕೋಷ್ಟಕ 4 ರಲ್ಲಿ ತಿಳಿಸಿರುವಂತೆ ಶೇಕಡ 69 ರಷ್ಟು ಜನರು ಇಂದಿರಾ ಕ್ಯಾಂಟೀನ್ ಸುತ್ತಮುತ್ತಲ ಪರಿಸರ ಉತ್ತಮವಾಗಿದೆ ಎಂದು ತಿಳಿಸಿದರೆ, ಶೇಕಡ 31 ರಷ್ಟು ಜನರು ಕ್ಯಾಂಟೀನ್ ಸುತ್ತಮುತ್ತಲ ಪರಿಸರ ಉತ್ತಮವಾಗಿಲ್ಲ ಎಂದು ತಿಳಿಸಿದ್ದಾರೆ. ಒಟಾರೆ ಅಭಿಪ್ರಾಯಗಳನ್ನು ಗಮನಿಸಿದಾಗ ಹೆಚ್ಚಿನ ಜನರು ಉತ್ತಮವಾಗಿದೆ ಎಂದು ತಿಳಿಸಿದ್ದಾರೆ. ಆದರೆ ಇನ್ನು ಶೇಕಡ 31 ರಷ್ಟು ಜನರು ಉತ್ತಮವಾಗಿಲ್ಲ ಎಂದಿದ್ದಾರೆ. ಕಾರಣ ಇವರಲ್ಲಿ ಹೆಚ್ಚಿನ ಜನರು ಶಿಕ್ಷಣವಂತರು ಹಾಗೂ ಕ್ಯಾಂಟೀನ್‌ಗೆ ಅತಿ ಹೆಚ್ಚು ಬಾರಿ ಆಹಾರ ಸೇವಿಸಲು ಭೇಟಿ ನೀಡುತ್ತಾರೆ. ಅಲ್ಲದೆ ಕೆಲವು ಕ್ಯಾಂಟೀನ್‌ಗಳಲ್ಲಿ ಅಡುಗೆ ಕೋಣೆ ಇರುವುದರಿಂದ ಅಲ್ಲಿಂದ ಹೊರಹೋಗಬೇಕಾದ ನೀರು ಸರಿಯಾಗಿ ಚರಂಡಿ ವ್ಯವಸ್ಥೆ ಇಲ್ಲದೆ ಕ್ಯಾಂಟೀನ್‌ನ ಮುಂದೆ ನೀರು ನಿಂತು ಕೆಟ್ಟ ವಾಸನೆ ಬರುತ್ತದೆ ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರು ಪ್ರಯೋಜನವಾಗಿಲ್ಲ ಎಂದು ತಿಳಿಸಿದ್ದಾರೆ.

**ಕೋಷ್ಟಕ: 5:** ಇಂದಿರಾ ಕ್ಯಾಂಟೀನ್ ಯೋಜನೆಯ ಬಗ್ಗೆ ಜನರ ಅಭಿಪ್ರಾಯ:

| ಅಭಿಪ್ರಾಯ | ಆವೃತಿ | ಶೇಕಡ |
|---|---|---|
| ಜನಪರ ಕಾರ್ಯಕ್ರಮ | 180 | 90% |
| ರಾಜಕೀಯ ಪ್ರೇರಿತ ಕಾರ್ಯಕ್ರಮ | – | – |
| ಏನನ್ನು ಹೇಳುವುದಿಲ್ಲ | 20 | 10% |
| **ಒಟ್ಟು** | 200 | 100% |

ಕೋಷ್ಟಕ 5 ರಲ್ಲಿ ತಿಳಿಸಿರುವಂತೆ ಶೇಕಡ 90 ರಷ್ಟು ಜನರು ಇಂದಿರಾ ಕ್ಯಾಂಟೀನ್ ಯೋಜನೆಯು ಜನಪರವಾದ ಕಾರ್ಯಕ್ರಮ ಎಂದು ತಿಳಿಸಿದರೆ, ಶೇಕಡ 10 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಿದರು ಯೋಜನೆಯ ಬಗ್ಗೆ ಅಭಿಪ್ರಾಯ ತಿಳಿಸಲಿಲ್ಲ. ಒಟ್ಟಾರೆ ಅಂಕಿ ಅಂಶಗಳನ್ನು ಗಮನಿಸಿದಾಗ ಅತಿ ಹೆಚ್ಚು ಜನರು ಅಂದರೆ ಶೇಕಡ 90 ರಷ್ಟು ಜನರು ಈ ಯೋಜನೆಯು ಅತ್ಯಂತ ಜನಪರ, ಬಡವರ ಪರವಾಗಿದೆ. ಅತಿ ಕಡಿಮೆ ದರದಲ್ಲಿ ಅಂದರೆ, ಕೇವಲ 5 ರೂಪಾಯಿಗಳಲ್ಲಿ ಬೆಳಗಿನ ತಿಂಡಿ ಮತ್ತು 10 ರೂಪಾಯಿಗಳಲ್ಲಿ ಮಧ್ಯಾಹ್ನ ಹಾಗೂ ರಾತ್ರಿಯ ಊಟ ವಿತರಿಸುತ್ತಿರುವುದು ನಮ್ಮಂತ ಸಾಮಾನ್ಯ ಜನರಿಗೆ ಬಹಳ ಉಪಯುಕ್ತವಾಗಿದೆ ಎಂದು ತಿಳಿಸಿದ್ದಾರೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಇಂದಿರಾ ಕ್ಯಾಂಟೀನ್‌ನ ಹೆಸರು ಬದಲಾವಣೆ ಮಾಡಬೇಕು ಎಂಬ ಪರ–ವಿರೋಧಗಳ ಚರ್ಚೆಗೆ ಸಂಬಂಧ ಪಟ್ಟಂತೆ ಅಧ್ಯಯನಕ್ಕೆ ಒಳಪಡಿಸಿದ ಪ್ರತಿಯೊಬ್ಬರು ಹೆಸರು ಬದಲಾವಣೆ ಮಾಡುವುದು ಬೇಡ ಅದರ ಬದಲು ಇನ್ನೂ ಹೆಚ್ಚಿನ ವಿವಿಧ ಬಗೆಯ ಆಹಾರ ತಿನಿಸುಗಳನ್ನು ವಿತರಿಸುವ ಕೆಲಸ ಮಾಡಲಿ ಎಂಬುದಾಗಿ ತಿಳಿಸಿದ್ದಾರೆ. ಹತ್ತಾರು ಟೀಕೆ ಟಿಪ್ಪಣಿ ಹಾಗೂ ವಿರೋಧಗಳ ನಡುವೆ ಇಂದಿರಾ ಕ್ಯಾಂಟೀನ್ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

**ಉಪಸಂಹಾರ**

ಈ ಲೇಖನವನ್ನು ನೀತಿ ನಿರೂಪಕರು ಮತ್ತು ಸಾಮಾಜಿಕ ಸಂಶೋಧಕರು ಸವಾಲಾಗಿ ಅರ್ಥೈಸಿಕೊಳ್ಳಬೇಕು. ಏಕೆಂದರೆ ಸರ್ಕಾರ ಬಡಜನರ ಹಸಿವು ನೀಗಿಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಕ್ಯಾಂಟೀನ್ ಪ್ರಾರಂಭವಾದ ದಿನಗಳಲ್ಲಿ ವಿತರಿಸುತ್ತಿದ್ದ ಆಹಾರದ ಗುಣಮಟ್ಟ ಬಹಳ ಅತ್ಯುತ್ತಮವಾಗಿತ್ತು. ಆದರೆ, ಪ್ರಸ್ತುತದ ದಿನಗಳಲ್ಲಿ ಗುಣಮಟ್ಟದಲ್ಲಿ ಸಾಕಷ್ಟು ಬದಲಾಗಿದೆ. ಬೆಳಗಿನ ಉಪಹಾರವಾಗಲಿ, ಮಧ್ಯಾಹ್ನದ ಊಟ ಅಥವಾ ರಾತ್ರಿಯ ಊಟವಾಗಲಿ ತೀರ ಕಳಪೆಯಾಗಿಲ್ಲ. ಆದರೆ, ಪ್ರಾರಂಭದಲ್ಲಿ ವಿತರಿಸುತ್ತಿದ್ದ ಆಹಾರದ ಗುಣಮಟ್ಟಕ್ಕೂ, ಈಗಿನ ಗುಣಮಟ್ಟಕ್ಕೂ ಬಹಳಷ್ಟು ವ್ಯಾತ್ಯಸಗಳಿರುವುದು ಸತ್ಯ ಸಂಗತಿ. ಹಾಗೆಯೇ ಆಹಾರದ ಮೆನುವಿನಲ್ಲಿ ಕೆಲವು ಬದಲಾವಣೆ ಆಗಬೇಕು ಚಪಾತಿ, ಪರೋಟ,

ದೋಸೆ ಇತ್ಯಾದಿ ವಿವಿಧ ಬಗೆಯ ಆಹಾರಗಳನ್ನು ವಿತರಿಸಬೇಕು ಎಂಬುದು ಜನರ ಬೇಡಿಕೆಯಾಗಿದೆ. ಕ್ಯಾಂಟೀನ್ ಸಿಂಬ್ಬಂದಿಗಳ ಕಾರ್ಯವೈಕರಿ ಹಾಗೂ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಜನರು ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದಾರೆ. ಹಾಗೆಯೇ ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಕ್ಯಾಂಟೀನ್ ತೆರೆದು, ಆಹಾರ ಸೇವಿಸಲು ಬರುವ ಜನರೊಂದಿಗೆ ಸ್ನೇಹಪರವಾಗಿ ವರ್ತಿಸಬೇಕು ಎಂಬುವುದಾಗಿ ಕೆಲವು ಜನರು ತಿಳಿಸಿದ್ದಾರೆ.

ಸುತ್ತಮುತ್ತಲ ಪರಿಸರಕ್ಕೆ ಸಂಬಂಧಿಸಿದಂತೆ ಕೆಲವೊಂದು ಕ್ಯಾಂಟೀನ್‌ಗಳು ಮುಖ್ಯರಸ್ತೆಗಳು ಹಾಗೂ ಜನಬೀಡ ಪ್ರದೇಶಗಳಲ್ಲಿರುವುದರಿಂದ ಸಾಮಾನ್ಯವಾಗಿ ರಸ್ತೆಯಲ್ಲಿ ಚಲಿಸುವ ವಾಹನಗಳ ಹೋಗೆ ಮತ್ತು ದೂಳಿನ ಸಮಸ್ಯೆಗಳಾಗುತ್ತದೆ. ಹಾಗೆಯೇ ಅಡುಗೆ ಕೋಣೆ ಜೊತೆಯಲ್ಲಿರುವ ಕ್ಯಾಂಟೀನ್‌ನಲ್ಲಿ ಮಾತ್ರ ಆಹಾರ ತಯಾರು ಮಾಡಲು ಬಳಸುವ ಹೆಚ್ಚುವರಿ ನೀರು ಕ್ಯಾಂಟೀನ್ ಮುಂದೆ ನಿಂತು ಸಮಸ್ಯೆ ಉಂಟಾಗುತ್ತದೆ.

ಕ್ಯಾಂಟೀನ್‌ನಲ್ಲಿ ಅಡುಗೆಗೆ ಬಳಸುವ ಪರಿಕರಗಳು, ಆಹಾರ ಸಂಗ್ರಹಣೆ ಮತ್ತು ಗ್ರಾಹಕರು ಬಳಸುವ ಲೋಟ, ತಟ್ಟೆ, ಹಾಗೂ ಶುದ್ಧ ಕುಡಿಯುವ ನೀರು ಮತ್ತು ನಲ್ಲಿಯ ವ್ಯವಸ್ಥೆ ಇತ್ಯಾದಿಗಳು ಉತ್ತಮವಾಗಿದೆ ಎಂದು ಬಹಳಷ್ಟು ಜನರು ತಿಳಿಸಿದ್ದಾರೆ.

ಒಟ್ಟಾರೆ ಮೈಸೂರು ನಗರದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗಿರುವ ಇಂದಿರಾ ಕ್ಯಾಂಟೀನ್ ನಿರ್ವಹಣೆಯಲ್ಲಿ ಕಂಡುಬರುವ ಕೆಲವೊಂದು ಸಣ್ಣ ಪುಟ್ಟ ಲೋಪದೋಷಗಳನ್ನು ಹೊರತು ಪಡಿಸಿ ಉಳಿದಂತೆ ಯೋಜನೆಯ ಗುರಿ ಉದ್ದೇಶಗಳು ಹಾಗೂ ಅದರ ಕಾರ್ಯವೈಕರಿಯ ಬಗ್ಗೆ ಜನರು ತೃಪ್ತಿಕರವಾದ ಮನೋಭಾವನೆ ಮತ್ತು ಉತ್ತಮ ಅಭಿಪ್ರಾಯವನ್ನು ಹೊಂದಿದ್ದಾರೆ. ವಿಶ್ವದ ಮನುಕುಲವನ್ನು ಕಾಡಿದ ಕೋವಿಡ್–19ರ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ನಿರ್ಗತಿಕ ಜನರ ಜೀವನಾಡಿಯಾಗಿ ಕೆಲಸ ಮಾಡಿದ್ದು ಇಂದಿರಾ ಕ್ಯಾಂಟೀನ್ ಯೋಜನೆ ಮಹತ್ವವನ್ನು ಸಾರುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಬಡಜನರು ಮತ್ತು ಕೂಲಿ ಕಾರ್ಮಿಕರ ಹಸಿವು ನೀಗಿಸುವಲ್ಲಿ ಇಂದಿರಾ ಕ್ಯಾಂಟೀನ್ ಜನಸ್ನೇಹಿ ಯೋಜನೆ ಎಂದರೆ ತಪ್ಪಾಗಲಾರದು.

**ಅಧ್ಯಯನದ ಫಲಿತಾಂಶಗಳು**

- ಇಂದಿರಾ ಕ್ಯಾಂಟೀನ್‌ನಲಿ ಆಹಾರ ಸೇವಿಸಲು ಬರುವವರ ಪೈಕಿ ಶೇಕಡ 64 ರಷ್ಟು ಜನರು ಸ್ಥಳಿಯ ನಿವಾಸಿಗಳಾಗಿದ್ದರೆ, ಶೇಕಡ 36 ರಷ್ಟು ಜನರು ಇತರೆ ಜಿಲ್ಲೆ, ತಾಲ್ಲೂಕು ಹಾಗೂ ಹೊರ ರಾಜ್ಯದಿಂದ ಬಂದಿರುವ ಕಾರ್ಮಿಕರಾಗಿದ್ದಾರೆ.
- ಶೇಕಡ 55 ರಷ್ಟು ಹಿಂದುಳಿದ ವರ್ಗಗಳ ಜನರು, ಶೇಕಡ 26 ರಷ್ಟು ಪರಿಶಿಷ್ಟ ಜಾತಿ ಜನರು ಹಾಗೇ ಶೇಕಡ 10 ರಷ್ಟು ಪರಿಶಿಷ್ಟ ವರ್ಗದ ಜನರು ಒಟ್ಟಾರೇ ಶೇಕಡ 91.5 ರಷ್ಟು ಅತ್ಯಂತ ಹಿಂದುಳಿದ ಸಮುದಾಯಗಳ ಜನರು ಮೈಸೂರು ನಗರದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗಿರುವ ಇಂದಿರಾ ಕ್ಯಾಂಟೀನ್ ಯೋಜನೆಯಿಂದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.
- ಇಂದಿರಾ ಕ್ಯಾಟೀನ್‌ನಲ್ಲಿ ಆಹಾರ ಸೇವಿಸಲು ಬರುವವರಲ್ಲಿ ಶೇಕಡ 44 ರಷ್ಟು ಕೂಲಿಯನ್ನು, ಶೇಕಡ 6 ರಷ್ಟು ಜನರು ವ್ಯವಸಾಯವನ್ನು, ಶೇಕಡ 2 ರಷ್ಟು ಜನರು ಸರ್ಕಾರಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಶೇಕಡ 16.5 ರಷ್ಟು ಜನರು ಖಾಸಗಿ ಕಂಪನಿಯಲ್ಲಿ ದುಡಿಯುತ್ತಿದ್ದರೆ, ಶೇಕಡ 9.5 ರಷ್ಟು ಜನರು ವಿದ್ಯಾರ್ಥಿಗಳಾಗಿದ್ದಾರೆ. ಹಾಗೆಯೇ ಶೇಕಡ 22 ರಷ್ಟು ಜನರು ಇತರೆ ಅಂದರೆ ಆಟೋರೀಕ್ಷಾ ಚಾಲನೆ, ಟ್ಯಾಕ್ಸಿ ಚಾಲನೆ ಹಾಗೂ ಸ್ವ–ಉದ್ಯೋಗ ಮಾಡುತ್ತಾರೆ.
- ಶೇಕಡ 46.5 ರಷ್ಟು ಜನರ ದಿನದ ಆದಾಯ 100 ರಿಂದ 200 ರೂಗಳಾಗಿದ್ದರೆ, ಶೇಕಡ 22 ರಷ್ಟು ಜನರ ಆದಾಯ 201 ರಿಂದ 300 ರೂಪಾಯಿಗಳು, ಹಾಗೆಯೇ ಶೇಕಡ 8 ರಷ್ಟು ಜನರ ಆದಾಯ 301 ರಿಂದ 400 ರೂಪಾಯಿ ಇದೆ. ಉಳಿದ ಶೇಕಡ 14 ರಷ್ಟು ಜನರ ದಿನದ ಆದಾಯ 401 ರೂಪಾಯಿಗೂ ಅಧಿಕವಾಗಿದೆ ಇನ್ನು ಶೇಕಡ 9.5 ರಷ್ಟು ವಿದ್ಯಾರ್ಥಿಗಳಾಗಿದ್ದಾರೆ ಹಾಗಾಗಿ ಅವರಿಗೆ ದಿನದ ಆದಾಯವಿಲ್ಲ.
- ಶೇಕಡ 42 ರಷ್ಟು ಜನರು ದಿನಕ್ಕೆ ಒಂದು ಬಾರಿ ಆಹಾರ ಸೇವಿಸಲು ಬರುತ್ತಾರೆ. ಶೇಕಡ 20 ರಷ್ಟು ಜನರು ದಿನದಲ್ಲಿ ಎರಡು ಬಾರಿ ಆಹಾರ ಸೇವಿಸಲು ಬರುತ್ತಾರೆ. ಹಾಗೆಯೇ ಶೇಕಡ 4 ರಷ್ಟು ಜನರು ದಿನಕ್ಕೆ ಮೂರು ಬಾರಿ ಬಂದರೆ, ಶೇಕಡ 34 ರಷ್ಟು ಜನರು ಆಗ್ಗಾಗೆ, ಅನಿರೀಕ್ಷಿತವಾಗಿ ಆಹಾರ ಸೇವಿಸಲು ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡುತಾರೆ.
- ಶೇಕಡ 27 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಉಪಹಾರ ಮತ್ತು ಊಟದ ಗುಣಮಟ್ಟ ಅತ್ಯುತ್ತಮವಾಗಿದೆ ಎಂದು, ಶೇಕಡ 50 ರಷ್ಟು ಜನರು ಆಹಾರ ಗುಣಮಟ್ಟ ಉತ್ತಮವಾಗಿದೆ ಎಂದು, ಅದೇರೀತಿ ಶೇಕಡ 20 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ವಿತರಿಸುವ ಆಹಾರ ಸಾಧರಣವಾಗಿದೆ ಎಂದು ತಿಳಿಸಿದರೆ, ಇನ್ನು ಶೇಕಡ 3 ರಷ್ಟು ಜನರು ಮಾತ್ರ ಆಹಾರದ ಗುಣಮಟ್ಟ ಕಳಪೆಯಾಗಿದೆ ಎಂದು ತಿಳಿಸಿದ್ದಾರೆ.
- ಶೇಕಡ. 18.5 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ಸಿಬ್ಬಂದಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು. ಶೇಕಡ 43.5 ರಷ್ಟು ಜನರು ಉತ್ತಮವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ ಎಂದು ತಿಳಿಸಿದ್ದಾರೆ. ಹಾಗೆಯೇ ಶೇಕಡ 29.5 ರಷ್ಟು ಸಾಧಾರಣವೆಂದು, ಶೇಕಡ. 8.5 ರಷ್ಟು ಜನರು ಅಷ್ಟೇನು ಉತ್ತಮವಾಗಿಲ್ಲ ಕೆಲಸ ನಿರ್ವಹಿಸುವುದಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 89.5 ರಷ್ಟು ಜನರು ಕ್ಯಾಂಟೀನ್‌ನಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ ಎಂದು, ಹಾಗೆಯೇ ಶೇಕಡ 81.5 ರಷ್ಟು ಜನರು ಕ್ಯಾಂಟೀನ್‌ನಲ್ಲಿ ನಿಂತುಕೊಂಡು ಊಟ ಸೇವಿಸುವ ಟೇಬಲ್ಸ್ ವ್ಯವಸ್ಥೆ ಶುಚಿತ್ವದಿಂದ ಇರುತ್ತದೆ ಎಂದು, ಅಲ್ಲದೆ ಶೇಕಡ 94.5 ರಷ್ಟು ಜನರು ಕ್ಯಾಂಟೀನ್‌ನಲ್ಲಿರುವ ತಟ್ಟೆ, ಲೋಟ ಹಾಗೂ ಆಹಾರ ಶೇಖರಿಸುವ ಸಾಮಾಗ್ರಿಗಳು ಶುಚಿತ್ವದಿಂದ ಕೂಡಿರುತ್ತದೆ ಎಂದು ತಿಳಿಸಿದ್ದಾರೆ.
- ಶೇಕಡ 69 ರಷ್ಟು ಜನರು ಇಂದಿರಾ ಕ್ಯಾಂಟೀನ್ ಸುತ್ತಮುತ್ತಲ ಪರಿಸರ ಉತ್ತಮವಾಗಿದೆ ಎಂದರೆ, ಶೇಕಡ 31 ರಷ್ಟು ಜನರು ಕ್ಯಾಂಟೀನ್ ಸುತ್ತಮುತ್ತಲ ಪರಿಸರ ಉತ್ತಮವಾಗಿಲ್ಲ ಎಂದು ತಿಳಿಸಿದ್ದಾರೆ.
- ಶೇಕಡ 90 ರಷ್ಟು ಜನರು ಇಂದಿರಾ ಕ್ಯಾಂಟೀನ್ ಯೋಜನೆಯು ಜನಪರವಾದ ಕಾರ್ಯಕ್ರಮ ಎಂದು ತಿಳಿಸಿದರೆ, ಶೇಕಡ 10 ರಷ್ಟು ಜನರು ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಿದರು ಯೋಜನೆ ಕುರಿತಂತೆ ತಮ್ಮ ಅಭಿಪ್ರಾಯ ತಿಳಿಸಿಲ್ಲ.

**ಸಲಹೆಗಳು**

- ಪ್ರಸ್ತುತ ವಿತರಿಸುವ ಉಪಹಾರ ಮತ್ತು ಊಟದ ಜೊತೆಗೆ ಚಪಾತಿ, ಪರೋಟ ರಾಗಿ ಮುದ್ದೆ ಇತ್ಯಾದಿ ಬಗೆಯ ಆಹಾರಗಳನ್ನು ನೀಡಬೇಕು ಎಂಬುವುದು ಜನರ ಬೇಡಿಕೆಯಾಗಿದೆ ಹಾಗಾಗಿ ಸರ್ಕಾರ ಜನರ ಬೇಡಿಕೆಯ ಬಗ್ಗೆ ಗಮನವಹಿಸಬೇಕು.
- ಅಂಗವಿಕಲರು, ಹಿರಿಯ ನಾಗರಿಕರು ಕ್ಯಾಂಟೀನ್ ನಲ್ಲಿ ಹೆಚ್ಚಿನ ಹೊತ್ತು ನಿಂತುಕೊಂಡು ಆಹಾರ ಸೇವಿಸಲು ತೊಂದರೆಯಾಗುವುದರಿಂದ ಅಂತವರಿಗೆ ಮನೆಗೆ ಪಾರ್ಸಲ್ ತೆಗೆದುಕೊಂಡು ಹೋಗುವವಹಾಗೆ ಅನುಕೂಲ ಮಾಡಿಕೊಡಬೇಕು. ಅಥವಾ ಕುಳಿತುಕೊಂಡು ಆಹಾರ ಸೇವಿಸಲು ಅಗತ್ಯವಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು.
- ಆಹಾರದ ಗುಣಮಟ್ಟದ ಬಗ್ಗೆ ಜನರು ಬೆಸರ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಉತ್ತಮ ಗುಣಮಟ್ಟದ ಉಪಹಾರ ಮತ್ತು ಊಟವನ್ನು ವಿತರಿಸುವ ಮೂಲಕ ಪೌಷ್ಠಿಕಾಂಶಕ್ಕೆ ಹೆಚ್ಚಿನ ಒತ್ತು ನೀಡಬೇಕು.
- ಕ್ಯಾಂಟೀನ್ ಸುತ್ತಮುತ್ತಲ ಪರಿಸರದ ಬಗ್ಗೆ ಜನರು ಬೆಸರ ವ್ಯಕ್ತಪಡಿಸಿದ್ದಾರೆ ಈ ಸಂಬಂಧ ದೂರಗಳು ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ವಚ್ಛತೆಯ ಬಗ್ಗೆ ಗಮನವಹಿಸಿ ಸಮಸ್ಯೆಗಳನ್ನು ಸರಿಪಡಿಸಬೇಕು.
- ಕ್ಯಾಂಟೀನ್ ನಿರ್ವಾಹಣೆಯ ಬಗ್ಗೆ ಲೋಪದೋಷಗಳು ಕಂಡುಬಂದ ತಕ್ಷಣವೇ ತಪ್ಪಿಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

**ಗ್ರಂಥಋಣ**


- Ashok Kumar A, Krishnan D. Perception Of Consumers Towards Amma Unavagum With Special Reference To Vellore City, Tamil Nadu, India, International Journal of Research in Business Management (IMPACT: IJRBM), ISSN 2321-886X. 2013 Oct;1(5):17-22
- Athreya VB, *et al*. Report on the State of Food Security in Urban India. MS.Swaminathan Research Foundation and World Food Programme, United Nations; c2010.
- Drèze Jean, Sen, Amartya. An Uncertain Glory: India and its Contradictions, Princeton University Press; c2013.
- Fernandez AP. History and spread of the self-help affinity group movement in India The role played by IFAD. Discussion paper- 3. IFAD; c2007. p. 38.
- Fouillet Cyril, Britta Augsburg. Spread of the Self-Help Groups Banking Linkage Programme in India. International Conference on Rural Finance Research: Moving Results. FAO Headquarters. Rome, Italy; 2007 March 19-21.
- Gopichandran V, *et al*., Household food security in urban Tamil Nadu: A survey in Vellore, The National Medical Journal of India; 2010, 23(5).
- Khera R. Mid-Day Meals: Looking Ahead. Journal of Development Studies; c2013, XLVIII(32).
- Mani Arul Nandhi, Cooperative Management, Food Security and Amma Unavagam - A Case Study from the Indian State of Tamil Nadu. Asia Pacific Research Conference on Cooperatives and Sustainable Development New Delhi; 2016, 15th November.
- Nirmala MM, Dr. KK Seethamma. The Role of Public Distribution System in Ensuring Food Security-A Study on Indira Canteen in Bangalore City; c2018.
- Rajendran S. *Amma Unavagams* of Tamil Nadu - Panacea for Urban Food Insecurity? Economic & Political Weekly. 2013; December 14, XLVIII(50).
- Sanapala VLN Uday Kumar, Bonu Manjula Beneficiaries" Perception towards Anna Canteen: A Study in Visakhapatnam District, Andhra Pradesh; c2018.


**ಪುಸ್ತಕಗಳು**


- ಕುಮಾರಸ್ವಾಮಿ.ಎ.ಎಸ್. ಮತ್ತು ಡಾ. ಶಶಿಧರ ಕೆ.ಸಿ (2004) 'ಆಹಾರ ಸುರಕ್ಷತೆ' ಕೃಷಿ ಕಿರಣ ಪ್ರಕಾಶನ, ಶಿವಮೊಗ್ಗ.
- ಪ್ರೋ. ಮಹೇಶ್ ಟಿ. ಎಮ್ ಮತ್ತು ಡಾ. ಯಶೋದ ಎಸ್(2018) ಕರ್ನಾಟಕ ರಾಜ್ಯದ "ಅನ್ನಭಾಗ" ಯೋಜನೆ ಮತ್ತು ಆಹಾರ ಭದ್ರತೆ ಪರಿಣಾಮಗಳು, ವಾಸವಿ ಪ್ರಕಾಶನ, ಮೈಸೂರು.
- ರಾಮಮೂರ್ತಿ. ಕೆ.ವಿ (2010) "ಸಾರ್ವಜಕ ವಿತರಣಾ ವ್ಯವಸ್ಥೆ ಕುರಿತು ಒಂದು ಸರಳ ಮಾಹಿತಿ" ಕೈಪಿಡಿ.


**ವರದಿಗಳು**


1. ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕೈಪಿಡಿ (2013)
2. ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕೈಪಿಡಿ (2016–17)
3. ಭಾರತ ಸರ್ಕಾರದ ಆಹಾರ ಇಲಾಖೆಯ ವಾರ್ಷಿಕ ವರದಿಗಳು.
4. ಕನ್ನಡದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ವಾರ್ತ ಭಾರತಿ, ವಿಜಯವಾಣಿ, ವಿಶ್ವವಾಣಿ ಮುಂತಾದ ದೈನಂದಿನ ಪತ್ರಿಕೆಗಳ ವರದಿಯನ್ನು ಅವಲೋಕಿಸಲಾಗಿದೆ.


**Website**


- https://pdsportal.nic.in, (PDS Portal of India, Ministry of Consumer Affairs, Food and Public Distribution,)
- Public Distribution System (PDS) – NFSA
- https://www.nic.in Public Distribution System National Informatics Centre.
- https://ahara.kar.nic.in (The Department of Food, Civil Supplies & Consumer Affairs.